# ವಿರಾಟ ರೂಪ ಸುಳಾದಿ
## [ಆದಿತ್ಯವಾರ ಸುಳಾದಿ]

**–ಧೃವತಾಳ–**

ಆಲಿಸಿ ಕೇಳುವುದು ಆದರದಿಂದಲಿ ।
ಶ್ರೀ ಲಕುಮೀಶನ ಭಕುತರೆಲ್ಲ ।
ಕಾಲ ದೇಶ ವ್ಯಾಪ್ತಳೆನಿಪಳಿಗಾದರು ।
ಶೀಲ ಮೂರುತಿ ಇಂದ ಸುಖವೆಂಬೋದೋ ।
ಕೇಳಿಬಲ್ಲದ್ದೆಸರಿ ಶ್ರುತಿ ಸ್ಮೃತಿ ಮುಖದಿಂದ ।
ಆಲೋಚನೆ ಇದಕ್ಕಿಲ್ಲ ಎಣಿಸಿಗುಣಿಸು ।
ಮೂಲಜೀವರ ಸುಖಕೆ ಶ್ರೀಪತಿ ಆದ ಬಳಿಕ ।
ಹಲವು ಬಗೆಯಲಿ ಹರಿಯ ಸಂಪಾದಿಸಿಸು ।
ಇಳಿಯೋಳು ವಾಜಿಪೇಯ ಪೌಂಡರಿಕಾದಿ ಯಜ್ಞ ।
ನಿರ್ಮಲವಾದ ಧ್ಯಾನ ಜಪ ನೇಮವೋ ।
ಜಾಲ ನಕ್ಷತ್ರ ಸಂಖ್ಯ ಮೀರಿದ ಮಹಾದಾನಾ ।
ಕಾಲೋಚಿತವಾದ ಕರ್ಮ ಧ್ಯಾನ ಮೌನ ।
ಜ್ವಾಲವಾದ ಕ್ರೂರ ತಪ ಹೋಮ ಸುರರರ್ಚನ ।
ಸ್ಥೂಲ ಕರ್ಮಾಭಿಜಾತ ಪುಣ್ಯದಿಂದ ।
ತ್ರಿಲೋಕಾಧಿಪತಿ ಸ್ಥಾನ ವೈದಿದ ನಂತರ ।
ಇಳಿಯಬೇಕೊ ಧರಿಗೆ ಭೂಯೊಭೂಯೊ ।
ಒಲಿಯನು ಇದಕ್ಕ ಜಲಜಾಯತೇಕ್ಷಣ ।
ಒಲಿಸಬೇಕೆಂಬೋದು ಮನದಲ್ಲಿತ್ತೆ ।
ಪೇಳಿದ ಮಾತಿನಲ್ಲಿ ಸಂದೇಹ ಮಾಡದಲೆ ।
ಸುಲಭವಾದ ಪಥಪಿಡಿಯೊ ಬೇಗ ।
ನೀಲಾಂಬುದ ಶ್ಯಮ ಗುರು ವಿಜಯ ವಿಠ್ಠಲರೇಯ ।
ಪಾಲಿಸುವನು ಇದಕೆ ಶ್ರುತಿಯೆ ಸಾಕ್ಷಿ॥ ೧ ॥

**–ಮಟ್ಟತಾಳ–**

ಪ್ರವೃತ್ತಿ ನಿವೃತ್ತಿ ಅಭಿಧಾನದಿ ಕರ್ಮ ।
ದ್ವಿವಿಧವಾಗಿ ವುಂಟು ತಿಳಿವದು ಚೆನ್ನಾಗಿ ।

ಪ್ರವೃತ್ತಿ ಕರ್ಮವನು ಸ್ವಪ್ನದಿ ಕಾಮಿಸದೆ ।
ನಿವೃತ್ತಿ ಕರ್ಮದಲಿ ರತಿಉಳ್ಳವನಾಗಿ ।
ದೇವ ಎನ್ನೊಳಗಿದ್ದು ಕಾಲಕರ್ಮಾನುಸಾರ ।
ಆವಾವದು ಮಾಳ್ಪ ಮಾಡುವೆನದರಂತೆ ।
ಆವ ಮಾಡಿಸದಿರಲು ನಾನ್ಯಾತಕೆ ಸಲ್ಲೆ ।
ಕಾವಕೊಲ್ಲುವ ತಾನೆ ಅನ್ಯರು ಎನಗಿಲ್ಲ ।
ಸರ್ವಾಧಿಷ್ಟಾನದಲಿ ಹರಿಯೆ ವ್ಯಾಪಿಸಿ ಇದ್ದು ।
ಶರ್ವಾದಿಗಳಿಂದ ವ್ಯಾಪಾರವ ಗೈಸಿ ।
ನಿರ್ವಾಹಕನಾಹ ಸ್ವತಂತ್ರ ತಾನಾಗಿ ।
ಓರ್ವನಾದರು ಶ್ವಾಸ ಬಿಡುವ ಸೇದಿಕೊಂಬ ।
ಗರ್ವಿಗಳಿಲ್ಲವೊ ಈ ಪೃಥ್ವಿಮಧ್ಯ ।
ಈ ವಿಧದಲಿ ತಿಳಿದು ಜೀವರ ಲಕ್ಷಣ ।
ಸಾವಧಾನದಿ ಗುಣಿಸು ಹರಿ ಕತೃತ್ವವನು ।
ದೇವದೇವ ಬಿಂಬ, ಜೀವನೆ ಪ್ರತಿಬಿಂಬ ।
ಭಾವಕೆಡದಂತೆ ಯೋಚಿಸು ಸರ್ವತ್ರ ।
ಜೀವಭಿನ್ನಗುರು ವಿಜಯವಿಠ್ಠಲರೇಯ ।
ಸೇವಕರಭಿಮಾನ ಯೆಂದೆಂದಿಗೆ ಬಿಡನು ॥ ೨ ॥

**–ತ್ರಿವಿಡಿತಾಳ–**

ತನುವಿನೊಳಗೆ ಹೊರಗೆ ವಿಭಕ್ತ ಅವಿಭಕ್ತ ।
ಅಣುಮಹದ್ರೂಪದಿ ಹರಿ ವಾಸವಕ್ಕು ।
ವನಜ ಜಾಂಡಾಧಾರವಾಗಿಪ್ಪ ರೂಪವನ್ನು ।
ಮನುಜರ ದೇಹಾಶ್ರಯ ವಾಗಿಪ್ಪದೊ ।
ನೀನೊಲಿದು ಕೇಳುವದು ಇದನೇವೆ ಅವಿಭಕ್ತ ।
ಘನರೂಪವೆಂಬೋರು ಜ್ಞಾನಿಗಳು ।
ಮುನಿಗಳಮತವಿದು ಸಂದೇಹ ಬಡಸಲ್ಲ ।
ಮನದಿ ಚಿಂತಿಸು ಈ ಶೂನ್ಯಾಭಿದನ ವ ।
ದನದ ಮೇಲೆ ವದನ ಶ್ರೋತ್ರದ ಮೇಲೆ ಶ್ರೋತ್ರ ನ ।
ಯನದ ಮೇಲೆ ನಯನ ಈ ಕ್ರಮದಿಂದಲಿ ।
ತನು ಸಮಸ್ತದಲ್ಲಿ ಹರಿ ತನ್ನ ಅಂಗದಿಂದ ।
ಅನುಸಾರವಾಗಿ ಆಶ್ರಯ ವಾಗಿಪ್ಪ ।

ಕ್ಷೋಣಿವೊಳಗೆ ಈರೂಪ ಅನುಪೇಕ್ಷದಿಂದ ।
ತನುವುನಿಲ್ಲದಯ್ಯಾ ವಿಧಿಗಾದರೂ ।
ಇನಿತು ಸೊಬಗ ಪರಿಜ್ಞಾನರಹಿತಗಾಗಿ ।
ವನಜ ಭವಾಂಡ ದಾನವಿತ್ತರೂನು ।
ವನಜನಾಭಾನೊಮ್ಮೆ ದೃಷ್ಟಿಲಿ ನೋಡನಯ್ಯಾ ।
ಅನುಮಾನ ಇದಕ್ಕಿಲ್ಲ ಶೃತ್ಯುಕ್ತವೊ ।
ವಿನಯದಿಂದಲಿ ಇದು ಸ್ಮರಿಸಿದ ಜನರಿಗೆ ।
ಜನುಮ ಜನುಮದ ಪಾಪ ಪ್ರಶಾಂತವೊ ।
ಬಿನಗು ಮೈಲಿಗೆ ಯುಂತೆ ಸ್ಪೃಷ್ಟಾಸ್ಪೃಷ್ಟದಿಂದ ।
ಅನುದಿನ ಪವಿತ್ರನು ಆಕೃತದಿಂದ ।
ಋಣತ್ರಯದಿಂದಲಿ ಮುಕ್ತನಾಗಿ ಸತತ ।
ದನುಜಾರಿ ಪುರವನ್ನೆ ಐದುವರೋಮಲಿನ ।
ಮನುಜರ ಮನಸಿಗೆ ತೋರನೊಮ್ಮೆ ।
ನೀನೆಗತಿಎಂದು ನಂಬಿದವರ ।
ಮನಕೆ ಪೊಳೆವನು ಬಿಡದೆ ಮಾತರಿಶ್ವನ ದಯದಿ ।
ಮನುಜಾ ತಿಳಿ ಇದನೆ ಭಕುತಿಇಂದ ।
ಗುಣಗಣ ಪೂರ್ಣ ಗುರು ವಿಜಯ ವಿಠ್ಠಲರೇಯ ।
ಜನನ ಮರಣಗಳಿಂದ ದೂರಮಾಳ್ಪ ॥ ೩ ॥

**–ಅಟ್ಟ ತಾಳ–**

ಈ ರೀತಿ ಇಂದಲಿ ದೇಹ ಧಾರಿಯ ರೂಪವ ।
ಸಾರಿಸಾರಿಗೆ ತಿಳಿದು ಪೂಜಿಸು ಗುಪ್ತದಿ ।
ಶಾರೀರ ಉಪಯೋಗವಾದ ವಿಷಯ ಜಾಲ ।
ಹರಿಗೆ ಷೋಡಶ ಉಪಚಾರ ವೆಂದೆನ್ನು ।
ಆರಾರು ಮಾಡುವ ವಂದನಾ ನಿಂದ್ಯೆಯು ।
ಶ್ರೀರಮಣನಿಗಿದು ಬಲು ಸ್ತೋತ್ರವೆಂದೆನ್ನು ।
ದಾರಾಪುತ್ರಾದಿ ಸಮಸ್ತ ಬಂಧುವರ್ಗ ।
ಪರಿಚಾರಕರೆನ್ನು ಘನ ಮಹಾಮಹಿಮಂಗೆ ।
ಮೆರೆವದೆಲ್ಲವು ಹರಿ ಮೆರವುದೆಂದೆನ್ನು ।
ನಿರುತದಲಿ ಇದು ಮರೆಯದೆ ಮನದೊಳು ।
ಕರಚರಣಾದಿಯಾವದ್ದವಯವ ಚೇಷ್ಟೆಯಾ ।

ಗುರುಮುಖದಲಿ ತಿಳಿದು ಯಜ್ಞಕ್ರಮದಿಂದ ।
ನೀರಜನಾಭನಿಗರ್ಪಿಸು ಅವದಾನ ಪೂರ್ವಕ ।
ಮಾರಜನಕ ಗುರು ವಿಜಯ ವಿಠ್ಠಲರೇಯ ।
ಕರವ ಪಿಡಿವನು ಇದನೇವೆ ಕೈಕೊಂಡು ॥ ೪ ॥

**–ಆದಿತಾಳ–**

ಬೊಮ್ಮಾಂಡದೊಳಗಿದ್ದ ಸ್ಥೂಲವಾದ ವಸ್ತುಗಳು ।
ನಿಮ್ನವಾಗಿ ದೇಹದಲ್ಲಿ ಸೂಕ್ಷ್ಮವಾಗಿ ಉಂಟುಕೇಳು ।
ಈಮ್ಮಹಾ ಲಕ್ಷಣದಿಂದಲೇ ಕ್ಷೇತ್ರವೆಂದು ।
ಸನ್ಮಾನ್ಯವಾಗಿಪ್ಪದೊ ಜಡಗಳ ಮಧ್ಯದಲ್ಲಿ ।
ಆ ಮಹಾ ಮಹಿಮನಾದ ಕ್ಷೇತ್ರಜ್ಞನನ್ನು ಭಜಿಸಿ ।
ಜನ್ಮವ ನೀಗುವದು ಅವ್ಯವಧಾನದಿಂದ ವೈ ।
ಷಮ್ಯರಹಿತ ಗುರು ವಿಜಯವಿಠ್ಠಲರೇಯ ।
ಸಮ್ಮುಖನಾಗುವನು ಈಪರಿ ತಿಳಿದರೆ ॥ ೫ ॥

**–ಜತೆ–**

ಸಕಲ ಸಾಧನ ಮಧ್ಯ ಉತ್ಕೃಷ್ಟವೆನಿಪದು ।
ನಖಶಿಖ ಪರಿಪೂರ್ಣ ಗುರುವಿಜಯ ವಿಠ್ಠಲ ವೊಲಿವ ॥ ೬ ॥

ಶ್ರೀ ಮಧ್ವೇಶಾರ್ಪಣಮಸ್ತು